ಮುಂಬೈ ಕನ್ನಡಿಗರಾದ ರಾಜೀವ ನಾರಾಯಣ ನಾಯಕ ಕಥೆಗಾರರಾಗಿ ಪ್ರಸಿದ್ಧರು. 'ಗುರ್ಬಾಣಕ್ಕಿ' ಮತ್ತು 'ಲಾಸ್ಟ್ ಲೋಕಲ್ ಲೋಸ್ಟ್ ಲವ್' ಎಂಬ ಎರಡು ಕಥಾಸಂಕಲನಗಳು ಪ್ರಕಟವಾಗಿವೆ. ರಂಗಭೂಮಿ ಕ್ಷೇತ್ರದಲ್ಲಿಯೂ ಸಕ್ರಿಯರಾಗಿ ತೊಡಗಿಸಿಕೊಂಡಿದ್ದಾರೆ.

ಹೆಚ್ಚಿನ ಚರ್ಚೆಗಳಿರಲಿ ಎಂದು ಬಯಸುತ್ತಿದ್ದದ್ದು ನಿಜ. ವಿದ್ಯಾರ್ಥಿಯಾಗಿದ್ದಾಗಲೂ ಬೇರೆ ಬೇರೆ ಕಾರಣಕ್ಕೆ ಹೊಸಬಣ್ಣ ಪೇಟೆ ಹುಡುಗರ ಗೇಲಿಗೆ ಗುರಿಯಾಗುತ್ತಿದ್ದುಂಟು. ಆದರೆ ಪ್ರಸ್ತುತ ಸಮಾಜದ ಒಡಕು ಮನಸ್ಥಿತಿ, ವೈಚಾರಿಕ ಅಸಹನೆ ತಮ್ಮ ತಲೆಮಾರಿನವರಿಗೂ ದಾಟಿರುವುದು ಆಘಾತವೆನಿಸಿತ್ತು. ಒಮ್ಮೊಮ್ಮೆ ಗ್ರುಪ್ ಬಿಟ್ಟಾಕಬೇಕು ಅನಿಸುತ್ತಿತ್ತು. ಬದಲಾಗುವ ಅಥವಾ ಬದಲಾಗದ ಮನುಷ್ಯ ಸ್ವಭಾವಗಳನ್ನು ಅರಿಯಲು ಇದೊಂದು ಉತ್ತಮ ವೇದಿಕೆ ಎಂದು ಅವನೊಳಗಿನ ಕಥೆಗಾರ ತಡೆಯುತ್ತಿದ್ದ.

ಈ ನಡುವೆ, ಗಣಿತಕ್ಕೆ ನೂರಕ್ಕೆ ನೂರು ತೆಗೆಯುತ್ತಿದ್ದ ರೋಹಿಣಿ, ಗ್ರುಪಿನವರ ಅನಗತ್ಯ ಮೇಲಾಟಗಳನ್ನು ಗ್ರಹಿಸಿ, ಗತದ ನೆನಪುಗಳಿಗೇ ಕಟ್ಟುಹಾಕಿದರೆ, ಗ್ರೂಪಿನಲ್ಲಿ ವೈಮನಸ್ಸು ತಡೆಯಬಹುದು ಎಂದು ಲೆಕ್ಕಹಾಕಿ, 'ನಮ್ಮ ಕಾಲೇಜು, ನಮ್ಮ ನಾಲೇಜು' ಎಂಬ ಮೆಮೊರಿ ಟೆಸ್ಟ್ ಶುರುಮಾಡಿದ್ದಳು. ಆಗಲೇ ಹೊಸಬಣ್ಣ, 'ನಮ್ಮ ಕಾಲೇಜಿನ ಕಣ್ಮಣಿ, ನಮಗೆ ತಾರುಣ್ಯ ಕರುಣಿಸಿದ ರಮಣಿ- ಯಾರು ಬಲ್ಲಿರೇನಯ್ಯಾ?' ಎಂಬ ಮೇಲಿನ ಪ್ರಶ್ನೆಯನ್ನು ಕೇಳಿದ್ದು; ನಾಗರತಿಯ ನೆನಪಿನಿಂದ ಎಲ್ಲರೂ ಬೆಳಂಬಾರದ ಸುಗ್ಗಿ ಹಬ್ಬದ ಕರಡಿಗಳಂತೆ ಕುಣಿದಾಡಿದ್ದು!

*

ಎಂಬತ್ತೊಂಬತ್ತರ ಬ್ಯಾಚಿನವರ ಈ 'ನಾಗಸಂಭ್ರಮ' ಸಕಾರಣವಾಗಿತ್ತು. ಕಾಲೇಜು ದಿನಗಳಲ್ಲಿ ನಾಗರತಿ ಅವರಲ್ಲಿ ಯೌವನದ ಕಾವು ಹೊತ್ತಿಸಿದ, ಕಾಮನೆಗಳನ್ನು ಉದ್ದೀಪಿಸಿದ ಹುಡುಗಿ. ಆ ಕಾಲಕ್ಕೆ ಮಾಡರ್ನ್ ಎನಿಸುವ ಅವಳ ನಡೆ-ನುಡಿಗಳಿಂದಾಗಿ, ಹುಡುಗರ ನಿದ್ದೆಗೆಡಿಸಿದ್ದಳು ಮಾತ್ರವಲ್ಲ, ಹುಡುಗಿಯರಿಗೂ ಹೊಸತನಕ್ಕೆ ತೆರೆದುಕೊಳ್ಳಲು ನಾಗರತಿ ಸ್ಫೂರ್ತಿಯಾದದ್ದು ಸುಳ್ಳಲ್ಲ. ಗೋವೆಯ ಮಾಪುಸಾ ಕಾಲೇಜಿನಲ್ಲಿ ಓದುತ್ತಿದ್ದವಳು ಅಂಕೋಲಿ ಕಾಲೇಜಿನಲ್ಲಿ ಅಡ್ಮಿಶನ್ ಮಾಡಿದ್ದಳು. ಮೂಲತಃ ಅವರು ಅಂಕೋಲಿಯವರಾಗಿದ್ದು ಹೌದು, ಆದರೆ ಕಾಲೇಜು ಓದಿಗೆ ಗೋವಾ ಬಿಟ್ಟು ಬಂದದ್ದು ಯಾಕೆಂಬುದು ಸ್ಪಷ್ಟವಿರಲಿಲ್ಲ. ಇಲ್ಲಿ ಕಾಲೇಜಿನ ಶೈಕ್ಷಣಿಕ ಗುಣಮಟ್ಟ ಚೆನ್ನಾಗಿದೆ, ಗೋವೆಯಲ್ಲಿ ವಿದೇಶಿಯರ ಸ್ವಚ್ಛಂದತೆ ಯಂಗ್ ಜನರೇಶನ್ ಹಾಳುಮಾಡುತ್ತಿದೆ ಎಂಬಿತ್ಯಾದಿ ಮಾತುಗಳು ಈ ವಲಸೆಯ ಸಮರ್ಥನೆಗಿದ್ದವು. ನಾಗರತಿ ಕಾಲೇಜಿನಲ್ಲಿ ಸೃಷ್ಟಿಸಿದ ಹೊಸ ಅಲೆಯಿಂದ ಕಾರಣಗಳು ಮುಖ್ಯವಾಗಲಿಲ್ಲ. ಹೆಚ್ಚಿನ ವಿದ್ಯಾರ್ಥಿಗಳು ಸಾಂಪ್ರದಾಯಿಕ ಉಡುಪು ಹಾಕುತ್ತಿದ್ದ ಆ ಕಾಲಘಟ್ಟದಲ್ಲಿ ಇವಳು ಜೀನ್ಸು, ಮಿನಿ ಸ್ಕರ್ಟನ್ನು ಬಿಂದಾಸಾಗಿ ಧರಿಸುತ್ತಿದ್ದಳು. ಸ್ಕರ್ಟ್ ತೊಟ್ಟ ದಿನ ಅವಳ ಬಿಳಿಬಿಳಿ ಕಾಲುಗಳ ದರ್ಶನಾನಂದದಿಂದ ಪುನೀತರಾಗಲು ಪಡ್ಡೆಗಳ ಸಾಲು ಹಿಂದೆ ಮುಂದೆ ಸುಳಿದಾಡುತ್ತಿತ್ತು. ಆಗ ಉದಯೋನ್ಮುಖ ಕವಿಯಾಗಿದ್ದ ಹಿಲ್ಲೂರ ಹೇಮಂತ, 'ಕಾಲುಮಾನ', 'ಓದು ಒಕ್ಕಾಲು-ನೋಡು ಮಂಡಿಕಾಲು' ಇತ್ಯಾದಿ ಮಾದಕ ಕವನಗಳನ್ನೇ ಬರೆದು ವಾಲ್‌ಪೇಪರಲ್ಲಿ ಛಾಪಿಸಿದ್ದ.

ನಾಗರತಿಯ ಅದ್ಭುತ ಚೆಲುವು, ಜೀವನೋತ್ಸಾಹ, ತರತಮವಿಲ್ಲದ ಸ್ನೇಹಭಾವದಿಂದಾಗಿ ಅವಳ ಸುತ್ತ ಒಂದು ಕಾಂತವಲಯವೇ ನಿರ್ಮಾಣವಾಗಿತ್ತು. ಅವಳು ಸಹಜವಾಗಿ ಮುಗುಳ್ನಕ್ಕರೂ ಕೂಡ ಪಡ್ಡೆಗಳಿಗೆ ಲವ್ವಾಗುತ್ತಿತ್ತು. ಹೀಗಾಗಿಯೇ ಅವಳ ಹೆಸರು ಹಲವರೊಂದಿಗೆ ಗಂಟುಬಿತ್ತು. ನಾಗರತಿಯದು ಆರ್ಟ್ಸ್ ಆಗಿದ್ದರೂ, ಸೈನ್ಸ್ ವಿದ್ಯಾರ್ಥಿಗಳೂ ಅವಳ ಆಕರ್ಷಣೆಗೆ ಬಿದ್ದಿದ್ದರು. ಹೊಸಬಣ್ಣನಿಗೂ ನಾಗರತಿಯ ಸೆಳೆತದಿಂದ ತಪ್ಪಿಸಿಕೊಳ್ಳುವುದು ಸಾಧ್ಯವಿರಲಿಲ್ಲ. ಅವಳ ಅಂದ ಮತ್ತು ಆತ್ಮವಿಶ್ವಾಸವನ್ನು ಅವನು ಗುಪ್ತವಾಗಿ ಆರಾಧಿಸುತ್ತಿದ್ದ. ಆದರೆ ಅಕಸ್ಮಾತಾಗಿ ಅವಳು ಎದುರಾದರೆ ಅವನ ಬಾಯಿ ಒಣಗುತ್ತಿತ್ತು. ಮನಸ್ಸಲ್ಲಿ ಮಂಡಿಗೆ ತಿಂದನೇ ಹೊರತು ಆಕೆಗೆ ಹಲೋ ಹೇಳುವಷ್ಟೂ ಧೈರ್ಯ ಬರಲಿಲ್ಲ. ಆದರೆ ನಾಗರತಿ ಹೊಸಬಣ್ಣನಲ್ಲಿ ಅಂದು ಬಿತ್ತಿದ ಕನಸುಗಳು ಇಂದಿಗೂ